ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆಯಆಯುಕ್ತರಕಚೇರಿ ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗರಸ್ತೆ,
ಕೆ.ಆರ್. ಸರ್ಕಲ್, ಬೆಂಗಳೂರು-560 001

ಸಂಖ್ಯೆ: ಸ.ಶಿ.ಅ/ಶಿಹಕೋ/ದಾಖಲಾತಿ/07/2014-15 ದಿನಾಂಕ: 11.03.2015

# ಸುತ್ತೋಲೆ

ವಿಷಯ: 2015-16 ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯ್ದೆಯ ಸೆಕ್ಷನ್ 12 (1) (ಸಿ) ಅನ್ವಯ ಪ್ರವೇಶ ಪ್ರಕ್ರಿಯೆ ಕುರಿತು.

ಉಲ್ಲೇಖ: 1.ಈ ಕಾರ್ಯಾಲಯದ ಸುತ್ತೋಲೆ ಸಂಖ್ಯೆ: ಸಶಿಅ/ಶಿಹಕೋ/ದಾಖಲಾತಿ/07/2014-15 ದಿ: 17.12.2014.

2. ಈ ಕಾರ್ಯಾಲಯದ ಸುತ್ತೋಲೆಯ ಸಮಸಂಖ್ಯೆ: ದಿ: 26.12.14
3. ಈ ಕಾರ್ಯಾಲಯದ ಸುತ್ತೋಲೆಯ ಸಮಸಂಖ್ಯೆ: ದಿ: 31.12.14
4. ಸರ್ಕಾರದ ಆದೇಶ ಸಂಖ್ಯೆ: ಇಡಿ 273 ಮಾಹಿತಿ.2014, ದಿ: 14.01.2015
5. ಈ ಕಾರ್ಯಾಲಯದ ಸುತ್ತೋಲೆಯ ಸಮಸಂಖ್ಯೆ: ದಿ: 29.01.2015
6. ಈ ಕಾರ್ಯಾಲಯದ ಸುತ್ತೋಲೆಯ ಸಮಸಂಖ್ಯೆ: ದಿ: 26.02.2015

***************

2015-16ನೇ ಸಾಲಿಗೆ ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12 (1) (ಸಿ) ಅನ್ವಯ ಅಲ್ಪಸಂಖ್ಯಾತವಲ್ಲದ ಅನುದಾನ ರಹಿತ ಶಾಲೆಗಳಲ್ಲಿ ಅನಾನುಕೂಲ ಪರಿಸ್ಥಿತಿಯಲ್ಲಿರುವ, ದುರ್ಬಲ ವರ್ಗದ ಮಕ್ಕಳಿಗೆ ಪ್ರವೇಶ ಪ್ರಕ್ರಿಯೆಯನ್ನು ಆನ್ ಲೈನ್ ಮೂಲಕ ನಡೆಸಲಾಗಿದೆ. ಈ ಸಂಬಂಧ ಕರ್ನಾಟಕ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಸೆಂಟರ್ ಮತ್ತು ಇ-ಆಡಳಿತ ಅಭಿವೃದ್ಧಿಪಡಿಸಿರುವ ತಂತ್ರಾಂಶವನ್ನು ರಾಜಾಸ್ತಾನ ರಾಜ್ಯ ಅಭಿವೃದ್ಧಿಪಡಿಸಿದ ತಂತ್ರಾಂಶದೊಂದಿಗೆ ಕರ್ನಾಟಕದ ನ್ಯಾಷನಲ್ ಇನ್ಫರ್ಮೇಟಿಕ್ ಸೆಂಟರ್ ತಾಳೆ ನೋಡಿ ಕರ್ನಾಟಕ ರಾಜ್ಯಕ್ಕೆ ಹೊಂದಿಕೊಳ್ಳುವಂತೆ ಸುಧಾರಿಸಿರುವ ತಂತ್ರಾಂಶವನ್ನು ಬಳಸಲಾಗಿದೆ.

ದಿನಾಂಕ: 11.03.2015 ರಂದು ಮಾನ್ಯ ಸಚಿವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ ಹಾಗೂ ಗೌರವಾನ್ವಿತ ಲೋಕಾಯುಕ್ತರ ಸಮ್ಮುಖದಲ್ಲಿ ಆನ್ ಲೈನ್ ಲಾಟರಿ ಪ್ರಕ್ರಿಯೆ ನಡೆಸಲಾಗಿದೆ. ಆಯ್ಕೆಯಾದ ಪೋಷಕರಿಗೆ ಅವರು ಅರ್ಜಿಯಲ್ಲಿ ನಮೂದಿಸಿರುವ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಕಳುಹಿಸಲಾಗುವುದು. ಅಲ್ಲದೆ ಸದರಿ ಫಲಿತಾಂಶವನ್ನು ಇಲಾಖಾ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುವುದು.

ಎಸ್.ಎಂ.ಎಸ್ ತಲುಪಿದ ಕೂಡಲೇ ಪೋಷಕರು ದಿನಾಂಕ: 20-03-2015ರೊಳಗೆ ಮೂಲ ದಾಖಲೆಗಳೊಂದಿಗೆ ಶಾಲಾ ಮುಖ್ಯಸ್ಥರನ್ನು ಭೇಟಿ ಮಾಡಿ ಮಗುವನ್ನು ಆರ್.ಟಿ.ಇ ಅಡಿಯಲ್ಲಿ ದಾಖಲು ಮಾಡಲು ಸೂಚಿಸಲಾಗಿದೆ. ಅರ್ಜಿಯ ಜೊತೆ ಸಲ್ಲಿಸಿರುವ ದಾಖಲೆಗಳು ತಾಳೆಯಾದಲ್ಲಿ, ಶಾಲಾ ಮುಖ್ಯಸ್ಥರು ಆನ್‌ಲೈನ್ ಲಾಟರಿ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಮಕ್ಕಳನ್ನು ದಾಖಲು ಮಾಡಿಕೊಳ್ಳುವುದು. ಪೋಷಕರಿಂದ ಸ್ವೀಕರಿಸಿದ ಯಾವುದೇ ಆಕ್ಷೇಪಣೆಯನ್ನು ಶಾಲಾ ಮುಖ್ಯಸ್ಥರು ಅವರ ಹಂತದಲ್ಲಿ

ತಿರಸ್ಕರಿಸುವಂತಿಲ್ಲ. ಹಾಗೆ ತಿರಸ್ಕರಿಸಿದಲ್ಲಿ ಶಿಕ್ಷಣ ಹಕ್ಕು ಕಾಯ್ದೆ ಸೆಕ್ಷನ್ 15ರ ಉಲ್ಲಂಘನೆಗಾಗಿ ಅಂತಹ ಶಾಲೆಗಳ ವಿರುದ್ದ ಕ್ರಮ ಜರುಗಿಸಲಾಗುವುದು. ಶಾಲಾ ಮುಖ್ಯಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪೂರಕ ದಾಖಲೆಗಳೊಂದಿಗೆ ಆಕ್ಷೇಪಣೆ ಸಲ್ಲಿಸಲು ತಿಳಿಸಲಾಗಿದೆ.

ಪೂರಕ ದಾಖಲೆಗಳೊಂದಿಗೆ ಶಾಲೆಗಳಿಂದ ಬಂದ ಆಕ್ಷೇಪಣೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸ್ವೀಕರಿಸಿದ 24 ಗಂಟೆಯೊಳಗೆ ನಿಯಮಾನುಸಾರ ಪರಿಶೀಲಿಸಿ, ಆಕ್ಷೇಪಣೆಯಲ್ಲಿ ನೈಜತೆ ಕಂಡುಬಂದಲ್ಲಿ ಅಗತ್ಯ ದಾಖಲೆಗಳೊಂದಿಗೆ ಪ್ರಕರಣದ ಮಾಹಿತಿಯನ್ನು ಆನ್ ಲೈನ್ ನಲ್ಲಿ ಅಪ್‌ಡೇಟ್ ಮಾಡಿ ನಿರ್ದೇಶಕರು ಪ್ರಾಥಮಿಕ ಶಿಕ್ಷಣ ಇವರಿಗೆ ಇ-ಮೇಲ್ ಮೂಲಕ ವಿವರವಾದ ವರದಿಯನ್ನು ಸಲ್ಲಿಸುವುದು.

ನೈಜ್ಯತೆಯಿಂದ ಕೂಡಿರುವ ಆಕ್ಷೇಪಣೆಗಳನ್ನು ರಾಜ್ಯ ಕಚೇರಿಯಲ್ಲಿ ಪರಿಶೀಲಿಸಿ ಏಪ್ರಿಲ್ ಮೊದಲ ವಾರದಲ್ಲಿ ಎರಡನೇ ಸುತ್ತಿನ ಲಾಟರಿ ಪ್ರಕ್ರಿಯೆ ನಡೆಸಲಾಗುವುದು.

ಶಾಲಾವಾರು ಆಯ್ಕೆಯಾದ ಮಕ್ಕಳ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ಶಾಲೆಗಳಿಗೆ ಕಳುಹಿಸಿಕೊಡುವುದು.

ಪೂರಕ ದಾಖಲೆಗಳೊಂದಿಗೆ ಶಾಲಾ ಮುಖ್ಯಸ್ಥರಿಂದ ಸ್ವೀಕರಿಸಿದ ಆಕ್ಷೇಪಣೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು 24 ಗಂಟೆಯೊಳಗೆ ಪ್ರಕರಣವನ್ನು ನಿಯಮಾನುಸಾರ ಪರಿಶೀಲಿಸಿ ಆಕ್ಷೇಪಣೆಯಲ್ಲಿ ನೈಜತೆ ಇಲ್ಲದಿದ್ದಲ್ಲಿ ಸ್ಪೀಕಿಂಗ್ ಆರ್ಡರ್ ಮಾದರಿಯಲ್ಲಿ ತಿರಸ್ಕರಿಸಿದ ಆದೇಶವನ್ನು ಹೊರಡಿಸಿ ಸಂಬಂಧಿಸಿದ ಪೋಷಕರಿಗೆ ದಿ: 20.03.2015 ರೊಳಗೆ ಹಿಂಬರಹ ನೀಡಿ, ಸ್ವೀಕೃತಿ ಪಡೆಯಲು ತಿಳಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಅವರ ಆಡಳಿತ ವ್ಯಾಪ್ತಿಗೆ ಸಂಬಂಧಿಸಿದ ಆನ್ ಲೈನ್ ಲಾಟರಿ ಫಲಿತಾಂಶದ ಮಾಹಿತಿಯನ್ನು ಡೌನ್‌ಲೋಡ್/ಅಪ್‌ಡೇಟ್ ಮಾಡಿಕೊಂಡು ಪ್ರವೇಶ ಪ್ರಕ್ರಿಯೆಯನ್ನು ಕಟ್ಟುನಿಟ್ಟಾಗಿ ಅನುಪಾಲಿಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1.ರಾಜ್ಯದಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರು (ಆಡಳಿತ) ಇವರಿಗೆ, ಸೂಕ್ತ ಕ್ರಮಕ್ಕಾಗಿ.

2.ರಾಜ್ಯದಎಲ್ಲಾ ವಲಯಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪ ನಿರ್ದೇಶಕರ ಮೂಲಕ)ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹು ಮಹಡಿಗಳ ಕಟ್ಟಡ, ಬೆಂಗಳೂರು, ಇವರ ಅವಗಾಹನೆಗಾಗಿ ಸಲ್ಲಿಸಿದೆ
2. ರಾಜ್ಯಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಬೆಂಗಳೂರು,ಇವರಿಗೆಮಾಹಿತಿಗಾಗಿ.
3. ಅಪರಆಯುಕ್ತರುಧಾರವಾಡ ಮತ್ತುಗುಲ್ಬರ್ಗಾ, ಇವರಿಗೆಮಾಹಿತಿಗಾಗಿ
4. ನಿರ್ದೇಶಕರು (ಕಾರ್ಯಕ್ರಗಳು), ಸರ್ವಶಿಕ್ಷಣ ಅಭಿಯಾನ, ನಿರ್ದೇಶಕರುಆರ್.ಎಂ.ಎಸ್.ಎ.ಇವರಿಗೆಮಾಹಿತಿಗಾಗಿ